ಹೊರದೂಡಿ ನಿಜವಾದ ಫಲಾನುಭವಿಗಳನ್ನು ಆ ಮನೆಯ ಒಳಗಡೆ ವಾಸಕ್ಕೆ ಬಿಡಬೇಕು. ಅದರಲ್ಲಿ ಸ್ವಲ್ಪ ತಡವಾಗಿದೆ. ಮಾನ್ಯ ಸದಸ್ಯರು ಕಳೆದ ವರ್ಷ ಹೇಳಿದ ಉತ್ತರವನ್ನೇ ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆಂದು ಹೇಳಿದ್ದಾರೆ. ನಾವು ಅದರ ಬಗ್ಗೆ ಈಗ ಅಧಿಕಾರಿಗಳಿಗೆ ಸೂಚನೆ ಕೊಟ್ಟು, ಕೂಡಲೇ ಅವರಿಂದ ಮನೆಗಳನ್ನು ತೆರವು ಮಾಡಿಸಿ ಫಲಾನುಭವಿಗಳನ್ನು ಒಳಗಡೆ ಬಿಡುವಂತಹ ಕೆಲಸವಾಗಬೇಕು. 1995ರಿಂದ 1999ನೇ ಸಾಲಿನ ಅವಧಿಯವರೆಗೂ ನಾವು 259 ಮನೆಗಳನ್ನು ಸ್ವಾಧೀನಕ್ಕೆ ಕೊಟ್ಟಿದ್ದೇವೆ. ಅದಲ್ಲದೆ ಈಗ ಮಾನ್ಯ ಸದಸ್ಯರು ಹೇಳುತ್ತಿರುವ ಮನೆಗಳು ಬೇರೆಯಾಗಿತ್ತು, ಅಲ್ಲಿ ಏನು ದೀಪಗಳ ವ್ಯವಸ್ಥೆ ಆಗಿಲ್ಲವೆಂದು ಇದೆ, ಅದನ್ನು ಸೇರಿಸಿ ಎಲ್ಲಾ ಮಾಡಿಕೊಡುತ್ತೇವೆ.

ಶ್ರೀ ಎ. ರಾಮದಾಸ್ : ಈ ಸದನ ಇವತ್ತು ಮುಗಿಯುತ್ತದೆ. ನಾವು ಕೊನೇ ಪ್ರಶ್ನೆ ಕೇಳುತ್ತಿದ್ದೇವೆ. ಒಂದೂವರೆ ವರ್ಷದಿಂದ 72 ಕುಟುಂಬಗಳು ಅಲ್ಲಿ ಅನಧಿಕೃತವಾಗಿ ಬಂದು ಸೇರಿಕೊಂಡಿದ್ದಾರೆ. ಯಾರು ಅಲ್ಲಿ ಕಷ್ಟಪಟ್ಟು ಕೂಲಿ ಮಾಡಿ ದುಡ್ಡು ಕಟ್ಟಿದ್ದರು ಅವರಿಗೆ ಕೊಡುವಂತಹ ವ್ಯವಸ್ಥೆಯಾಗಿಲ್ಲ. ಅಲ್ಲಿ ದೊಡ್ಡ ಗಲಾಟೆಯಾಗಿ ಮೈಸೂರಿನಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಂ ಆಗಿತ್ತು. ಅದು ಇನ್ನೂ ಪರಿಹಾರವಾಗಿಲ್ಲ. ಅದು ಪರಿಹಾರವಾದರೆ ಸಾಕು, ನನ್ನ ಪ್ರಶ್ನೆಗೆ ಉತ್ತರ ಬಂದಹಾಗೆ ಆಗುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಇದು ಹೇಗಾಗಿದೆ ಎಂದರೆ ಕಷ್ಟಪಟ್ಟು ಸಾಲಸೋಲ ಮಾಡಿ ಒಬ್ಬ ಮದುವೆ ಮಾಡಿಕೊಂಡು ಬಂದನಂತೆ. ಕಾದು ಕುಳಿತವನು ಆ ಹೆಣ್ಣನ್ನು ಕರೆದುಕೊಂಡು ಹೋದನಂತೆ, ಹಾಗೆ ಆಯಿತು. ಆ ರೀತಿ ಬೇರೆಯವರು ಅಲ್ಲಿ ಮನೆಗಳನ್ನು ಆಕ್ಯುಪೈ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ನನ್ನ ಸಮಸ್ಯೆ ಏನೆಂದರೆ, ಮಾನ್ಯ ನಂಜೇಗೌಡರಿಗೆ ಅದು ಅರ್ಥವಾಯಿತು. ನನಗೆ ಆಗಲಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಇನ್ನು ಅಲ್ಲಿ ಕೆಲವು ಸಣ್ಣಪುಟ್ಟ ಕೆಲಸಗಳು ಆಗಿಲ್ಲ. ಬಾಕಿ ಇರುವಂತಹ ಕೆಲಸಗಳನ್ನು ನಾವು ಮಾಡಿಕೊಡುತ್ತೇವೆ. ಜೊತೆಗೆ ಅನಧಿಕೃತವಾಗಿ ಇರುವವರನ್ನು ಪೋಲೀಸ್ ಫೋರ್ಸ್ ಅಥವಾ ಬೇರೆ ಯಾವ ರೀತಿ ಮಾಡಬೇಕೆಂದು ನೋಡಿ ಅತೀ ಶೀಘ್ರದಲ್ಲೇ ಅವರನ್ನು ಆಚೆ ಹಾಕಿ ನಿಜವಾಗಿ ಇರುವಂತಹ ಫಲಾನುಭವಿಗಳನ್ನು ಒಳಗಡೆ ಸೇರಿಸುವಂತಹ ಕಾರ್ಯವನ್ನು ನಾವು ಮಾಡುತ್ತೇವೆ.

ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ ನೀರಿನ ಯೋಜನೆ

306 - ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ತಿಕೋಟ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ

ನೀರಿನ ಯೋಜನೆ ಕಾರ್ಯ ಇನ್ನೂ ಮುಕ್ತಾಯಗೊಳ್ಳದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ? ಹಾಗೂ ಅದನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವರು) :

ಅ) ಹೌದು ಗಮನಕ್ಕೆ ಬಂದಿದೆ.

ಆ) ಈ ಕಾಮಗಾರಿಯ ಕೆಲಸಗಳನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು ದಿನಾಂಕ 25.9.97 ರಿಂದ ಪ್ರಾರಂಭವಾಗಿದೆ. ಈ ಕಾಮಗಾರಿಯ ನಿರ್ಮಾಣ ಅವಧಿ 30.6.99ರವರೆಗೆ ಇರುತ್ತದೆ.

ಈ ಕಾಮಗಾರಿಯ ಪೈಕಿ ಈಗಾಗಲೇ ಭೂ ಮಟ್ಟ ಜಲಾಗಾರ ನಿರ್ಮಿಸಿದ್ದು ಅಲ್ಲಿಂದ ಊರಿನವರೆಗೆ ಪೈಪನ್ನು ಅಳವಡಿಸಲಾಗಿದೆ. ಹಾಗೂ ಗ್ರಾಮದಲ್ಲಿಯ ವಿತರಣಾ ಕೊಳವೆಗಳನ್ನು ಜೋಡಿಸುವ ಕಾರ್ಯ ಪೂರ್ಣಗೊಂಡಿದ್ದು ಈ ವಿತರಣಾ ವ್ಯವಸ್ಥೆಯಿಂದ ಈಗಾಗಲೇ ಮೊದಲಿದ್ದ ಜಲಮೂಲದ ಮುಖಾಂತರ ಗ್ರಾಮಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ.

ಈಗ ಬಾಕಿ ಇರುವ ಕೆಲಸಗಳ ಪೈಕಿ ಅಂದರೆ ಹಳ್ಳದಲ್ಲಿ ಪೈಪ್ ಹಾಕುವುದು ಹಾಗೂ ಮೊದಲಿದ್ದ ಊರಿನಲ್ಲಿ ಜಲಾಗಾರಗಳನ್ನು ರಿಪೇರಿ ಮಾಡುವ ಕೆಲಸ ಭರದಿಂದ ನಡೆದಿರುತ್ತವೆ. ವಿದ್ಯುತ್ ಪೂರೈಕೆಯ ಬಗ್ಗೆ ಕರ್ನಾಟಕ ವಿದ್ಯುತ್ ಮಂಡಳಿಯನ್ನು ಈಗಾಗಲೇ ಸಂಪರ್ಕಿಸಿ ವಿದ್ಯುತ್ ಪೂರೈಕೆಯ ಬಗ್ಗೆ ಕ್ರಮಕೈಕೊಳ್ಳಲಾಗಿದೆ. ಈ ಯೋಜನೆಯು ದಿನಾಂಕ 31.7.99ರೊಳಗೆ ಮುಗಿಸಲಾಗುವುದು.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ : ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಶ್ನೆಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು, ನನ್ನ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ. ತಮಗೆ ಮಾನ್ಯ ರಾಜ್ಯ ಸಚಿವರಾದ ಶ್ರೀ ಎಂ.ಸಿ. ಮನಗೋಳಿಯವರು ಉತ್ತರ ಕೊಡುತ್ತಾರೆ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಲಾಸ್ಟ್ ಟೈಮ್ ನಾನೇ ಉತ್ತರವನ್ನು ಕೊಡುತ್ತೇನೆಂದು ಟೈಮ್ ತೆಗೆದುಕೊಂಡಿದ್ದಾರೆ. ಅದು ಈಗ ತಡೆ ಹಿಡಿಯಲಾದ ಪ್ರಶ್ನೆಯಾಗಿದೆ.

ಅಧ್ಯಕ್ಷರು : ಇದು ತಡೆ ಹಿಡಿಯಲಾದ ಪ್ರಶ್ನೆಯಾದರೂ ಮಾನ್ಯ ರಾಜ್ಯ ಸಚಿವರು ಇದ್ದಾರೆ, ಅವರು ಉತ್ತರ ಹೇಳುತ್ತಾರೆ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ : ಮಾನ್ಯ ಅಧ್ಯಕ್ಷರೆ, ತಾವು ಏನು ಹೇಳಿದಿರಿ, ಎಂಬುದು ನನಗೆ ಕೇಳಿಸಲಿಲ್ಲ.

ಅಧ್ಯಕ್ಷರು : ಅವರು ಉತ್ತರವನ್ನು ಒದಗಿಸಿದ್ದಾರೆ. ತಾವು ಉಪ ಪ್ರಶ್ನೆಯನ್ನು ಕೇಳಬಹುದು. ಈಗ ಇಲ್ಲಿ ಕಣ್ಣು ನಿಮ್ಮದೇ ಸೂಜಿನೂ ನಿಮ್ಮದೇ, ನೀವು ಇಬ್ಬರೂ ಒಂದೇ ಊರಿನವರಾಗಿದ್ದೀರಿ. ತಾವು ಏನೇನು ಪ್ರಶ್ನೆಯನ್ನು ಕೇಳಬೇಕೆಂದು ಇದ್ದೀರೋ ಕೇಳಿ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ : ಮಾನ್ಯ ಅಧ್ಯಕ್ಷರೆ, 1986ರಲ್ಲಿ ಈ ಯೋಜನೆ ನೆದರ್‌ಲ್ಯಾಂಡ್ ಗೌವರ್ನಮೆಂಟ್‌ನೊಂದಿಗೆ ಅಗ್ರಿಮೆಂಟ್ ಆಗಿದ್ದು, ಇದನ್ನು 1993ರಲ್ಲಿ ಕಾರ್ಯಗತ ಮಾಡುವುದಕ್ಕೆಂದು ತೆಗೆದುಕೊಂಡರು, ಆದರೆ ಅದು ಆಗಲಿಲ್ಲ. ಇದನ್ನು 1996ರಲ್ಲಿ ಕೆಲಸ ಪ್ರಾರಂಭ ಮಾಡಿದ್ದಾರೆ, ಈ ಕೆಲಸವನ್ನು 1998ರಲ್ಲಿ ಮುಗಿಸುತ್ತೇವೆಂದು ಹೇಳಿದ್ದರು. ಆದರೆ ಈಗ 1999ರಲ್ಲಿ ಮುಗಿಯುತ್ತಿದೆ. ಇವರು 1996ರಲ್ಲಿ, 1998ರಲ್ಲಿ, ಈ ಕೆಲಸವನ್ನು ಮುಗಿಸುತ್ತೇವೆಂದು ಹೇಳಿದರೂ ಮುಗಿಸಲಿಲ್ಲ. ಈಗ 1999ರಲ್ಲಿಯೂ ಮುಗಿಯಲಿಲ್ಲ. ಇದು ನನ್ನದೊಂದೇ ಸಮಸ್ಯೆಯಲ್ಲ. ಈ ಯೋಜನೆಯಿಂದ ಕರ್ನಾಟಕ ರಾಜ್ಯಕ್ಕೆ ಸುಮಾರು 63 ಕೋಟಿ ರೂಪಾಯಿಗಳು ಸಿಗುತ್ತದೆ. ಅದರಲ್ಲಿ ನಮ್ಮ ಜಿಲ್ಲೆಗೆ ಮೂವತ್ತು ಕೋಟಿ ರೂಪಾಯಿಗಳು ಸಿಗುತ್ತದೆ. ಆದರೆ ಇದುವರೆಗೂ ನಮ್ಮ ಜಿಲ್ಲೆಯ ಯಾವ ಭಾಗದಲ್ಲೂ ಕೆಲಸ ಮುಗಿದ ವರದಿ ಬಂದಿಲ್ಲ. ಆದುದರಿಂದ ಇದರ ಬಗ್ಗೆ ಎಷ್ಟು ಪ್ರಗತಿಯಾಗಿದೆ, ಯಾವಾಗ ಮುಗಿಯುತ್ತದೆಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಂ.ಸಿ. ಮನಗೋಳಿ : ಮಾನ್ಯ ಅಧ್ಯಕ್ಷರೆ, ಈ ತಿಂಗಳ ಅಂತ್ಯದೊಳಗೆ ಸದರಿ ಸರ್ಕಾರದೊಂದಿಗೆ ತೆಗೆದುಕೊಂಡ ಕೆಲಸ ಮುಗಿಯುತ್ತದೆ. ಈಗ ಪೈಪ್ ಲೈನ್ ಕೆಲಸ, ರಿಜರ್ವಾಯರ್ ಕೆಲಸಗಳು ಮುಗಿದಿದೆ. ಇನ್ನು ಕೆ.ಇ.ಬಿ. ಕನೆಕ್ಷನ್ ಕೆಲಸ ಮಾತ್ರ ಉಳಿದಿದೆ. ಈ ತಿಂಗಳ ಅಂತ್ಯದಲ್ಲಿ ಈ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣವಾಗಿ ಮುಗಿಸುತ್ತೇವೆನ್ನುವಂಥಾದ್ದನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ : ಇದರಲ್ಲಿ ಬಿಜಾಪುರ ಜಿಲ್ಲೆಗೆ ಮೀಸಲಾಗಿ ಇಟ್ಟಿರುವಂತಹ ಹಣ ಮೂವತ್ತಮೂರು ಕೋಟಿ ರೂಪಾಯಿಗಳು, ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರೆಂಬುದನ್ನು ತಾವು ತಿಳಿಸಬೇಕು, ಮತ್ತೆ ಈ ಯೋಜನೆಯ ಮೂಲ ವೆಚ್ಚ ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಇತ್ತು, ಈವತ್ತು ಅದು ರಿವೈಸ್ ಆಗಿದೆ ಎಂದು ಹೇಳುತ್ತಾರೆ, ಅದಕ್ಕೆ ಸ್ಥಾನಿಕ ಅಧಿಕಾರಿಗಳು ಅಲ್ಲಿ ಯಾರೂ ಇರುವುದಿಲ್ಲ, ನಾವು ಇದರ ಎಸ್ಟಿಮೇಟ್ ಡಿಟೈಲ್ ತೆಗೆದುಕೊಳ್ಳಬೇಕೆಂದರೆ ಧಾರವಾಡ ಜಿಲ್ಲೆಗೆ ಹೋಗಬೇಕು. ಬಿಜಾಪುರ ಜಿಲ್ಲೆಗೆ ಮೂವತ್ತು ಕೋಟಿ ರೂಪಾಯಿಗಳು ಖರ್ಚು ಆಗುತ್ತಿದೆ.

ಅಧ್ಯಕ್ಷರು : ಈಗ ನೀವು ಪ್ರಶ್ನೆಯನ್ನು ಕೇಳಿದ್ದೀರಿ, ಅವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಯವರು ಈ ತಿಂಗಳಾಗುವುದರೊಳಗೆ ಎಲ್ಲಾ ಕೆಲಸ ಮುಗಿಸುತ್ತೇವೆಂದು ಹೇಳಿದ್ದಾರೆ. ನೀವು ಈಗ ಇಡೀ ಜಿಲ್ಲೆಗೆ ಸಂಬಂಧಪಟ್ಟಹಾಗೆ ಹೇಳುತ್ತಿದ್ದೀರಿ. ಅವರ ಹತ್ತಿರ ಈಗ ಪೂರ್ತಿ ವಿವರಗಳು ಇದೆಯಾ?

ಶ್ರೀ ಎಂ.ಸಿ. ಮನಗೋಳಿ : ಮಾನ್ಯ ಅಧ್ಯಕ್ಷರೆ, ಸದರಿ ಯೋಜನೆಗೆ ಐವತ್ತೆರಡು ಕೋಟಿ ರೂಪಾಯಿಗಳು ಮಂಜೂರು ಆಗಿರುವಂಥಾದ್ದು ಇದೆ. ಈಗಾಗಲೇ ಇಪ್ಪತ್ತೆರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಐವತ್ತೆರಡು ಕೋಟಿ ರೂಪಾಯಿಗಳ ಹಣದಲ್ಲಿ ಧಾರವಾಡ ಜಿಲ್ಲೆಯಲ್ಲಿ ಇಪ್ಪತ್ತು ಹಳ್ಳಿಗಳು, ಬಿಜಾಪುರದಲ್ಲಿ ಹದಿನಾಲ್ಕು ಹಳ್ಳಿಗಳನ್ನು ಈ ಯೋಜನೆಯಲ್ಲಿ ಅಳವಡಿಸಲಾಗಿದೆ. ವಿವಿಧ ಹಂತಗಳಲ್ಲಿ ಈ ಕೆಲಸ ಪ್ರಗತಿಯಲ್ಲಿದೆ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಪಾಟೀಲ ಶಿವಾನಂದ ಸಿದ್ರಾಮಪ್ಪ : ಮಾನ್ಯ ಅಧ್ಯಕ್ಷರೆ, ಈ ಯೋಜನೆಗೆ ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಇತ್ತು. ಇದು ಈಗ ರಿವೈಸ್ ಆಗಿ ಹೆಚ್ಚಿಗೆ ಆಗಿದೆ ಎಂದು ಕೇಳಿದ್ದೇನೆ. ಇದರ ಬಗ್ಗೆ ಅಲ್ಲಿ ಕೇಳೋಣವೆಂದರೆ ಅಧಿಕಾರಿಗಳು ಇಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಧಾರವಾಡದಲ್ಲಿ ಇದ್ದಾರೆ. ಈ ಯೋಜನೆಯಲ್ಲಿ ಬಿಜಾಪುರಕ್ಕೆ ಮೂವತ್ತು ಕೋಟಿ ರೂಪಾಯಿಗಳನ್ನು ಅಂದಾಜು ಮಾಡುವಂಥಾದ್ದು, ಇಲ್ಲಿ ಒಬ್ಬ ಎಕ್ಸಿಕ್ಯೂಟೀವ್ ಇಂಜಿನಿಯರ್ ಇದ್ದಾರೆ, ಒಬ್ಬ ಜೂನಿಯರ್ ಇಂಜಿನಿಯರ್ ಇದ್ದಾರೆ. ಇವರೂ ಸಹ ಬಿಜಾಪುರದಲ್ಲಿ ಇರುವುದಿಲ್ಲ, ಧಾರವಾಡದಿಂದ ಬಂದು ಹೋಗುತ್ತಾರೆ. ಇದನ್ನು1996ರಲ್ಲೇ ಮುಗಿಸುತ್ತೇವೆಂದು ಮಾನ್ಯ ಮಂತ್ರಿಯವರಾದ ಎಂ.ಪಿ. ಪ್ರಕಾಶ್‌ರವರು ಹೇಳಿದ್ದರು, ಪುನಃ 1996ರಲ್ಲಿ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ. ಆದುದರಿಂದ ತಾವು ದಯಮಾಡಿ ಬಿಜಾಪುರಕ್ಕೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಅನ್ನು ಅಥವಾ ಒಬ್ಬ ರೆಸ್ಪಾನ್ಸಿಬಲ್ ಆಫೀಸರ್ಸ್ ಅನ್ನು ಕೊಡುವುದಕ್ಕೆ ಆಗುವುದಾದರೆ ಈ ಕೆಲಸ ಸರಿಯಾಗಿ ಆಗುತ್ತದೆ.

ಶ್ರೀ ಎಂ.ಸಿ. ಮನಗೋಳಿ : ಮಾನ್ಯ ಅಧ್ಯಕ್ಷರೆ, ಈ ಯೋಜನೆ ಮಂದಗತಿಯಲ್ಲಿ ಆಗುತ್ತಿರುವುದನ್ನು ಕಂಡು ಈಗ ಮುಂದಿನ ಕೆಲಸವನ್ನು ಲ್ಯಾಂಡ್ ಆರ್ಮಿಯವರಿಗೆ ವಹಿಸಿ ಕೊಟ್ಟಿದ್ದೇವೆ.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಒಳಚರಂಡಿ ವ್ಯವಸ್ಥೆ

394 - ಶ್ರೀ ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಒಳಚರಂಡಿ ಯೋಜನೆಯು ತೀರ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಸುಧಾರಿಸಲು ಕೈಕೊಳ್ಳಲಾದ ಕ್ರಮವೇನು? ಇದಕ್ಕೆ ತಗಲುವ ವೆಚ್ಚವೆಷ್ಟು? (ಮಾಡುವ ಕಾಮಗಾರಿಗಳ ಪೂರ್ತಿ ವಿವರ ತಿಳಿಸಿರುವುದು)

ಇ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ 4 ವರ್ಷಗಳಲ್ಲಿ ಸಂಗ್ರಹವಾದ ಡ್ರೈನೇಜ್ ಸೆಸ್ ಎಷ್ಟು? ಅದನ್ನು ಯಾವ ಕಾಮಗಾರಿಗಳಿಗೆ ಉಪಯೋಗಿಸಲಾಗಿದೆ? (ಕಾಮಗಾರಿಗಳ ಪೂರ್ತಿ ವಿವರ ಹಾಗೂ ತಗಲಿದ ಖರ್ಚಿನ ವಿವರ ತಿಳಿಸುವುದು)

ಈ) ಅದರಲ್ಲಿ ಖರ್ಚಾಗದೆ ಉಳಿದಿರುವ ಡ್ರೈನೇಜ್ ಸೆಸ್ ಎಷ್ಟು?